MVC.1460/2024 PW-1

**ದಿನಾಂಕಃ 20.02.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ.ಜೆ.ಬಿ. ವಕೀಲರಿಂದಃ</u>**

ನಾನು ಮತ್ತು 8 ಜನ ಜೊತೆಗೆ ಇಬ್ಬರು ಮಕ್ಕಳು ಗೌಡಗೆರೆಯಿಂದ ಕಾರಿನಲ್ಲಿ ಹೋಗುತ್ತಿರುತ್ತೇನೆ. ನಮ್ಮ ಕಾರಿನಲ್ಲಿ ಹೆಚ್ಚು ಜನ ಇರುಲಿಲ್ಲ ಆದರೆ ಮಕ್ಕಳನ್ನು ನಮ್ಮ ಮೇಲೆ ಕೂರಿಸಿಕೊಂಡಿರುತ್ತೇವೆ. ಅಪಘಾತವು ಗೌಡಗೆರೆ ಸರ್ಕಲ್ ನಲ್ಲಿ ರಾತ್ರಿ ನಡೆದಿರುತ್ತದೆ. ನನಗೆ ಅಪಘಾತವು ಯಾವ ರೀತಿ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ನನಗೆ ಅಪಘಾತದ ನಂತರ ಪ್ರಜ್ಞೆ ಹೋಗಿ ಶಸ್ತ್ರ ಚಿಕಿತ್ಸೆ ಆಗಿ ನಂತರ ಬಂದಿರುತ್ತದೆ. ಅಪಘಾತದ ನಂತರ ನನ್ನನ್ನು ಶಿರಾ ಆಸ್ಪತ್ರೆಗೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಹೇಮವತಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನಗೆ ಶಸ್ತ್ರ ಚಿಕಿತ್ಸೆಯಲ್ಲಿ Spinal cord ಗೆ 6 Screw ಹಾಕಿರುತ್ತಾರೆ. ನನ್ನ ಶಸ್ತ್ರ ಚಿಕಿತ್ಸೆಗೆ ರೂ.2 ಲಕ್ಷ ಮೇಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ Discharge Summary ಯಲ್ಲಿ ವೈದ್ಯರು 6 ತಿಂಗಳು ಕಾಲ ವಿಶ್ರಾಂತಿ ಪಡೆಯುವ ಬಗ್ಗೆ ಬರೆದು ಕೊಟ್ಟಿರುತ್ತಾರೆ.

2. ನಾನು SSLC ಓದಿಕೊಂಡು ಬಟ್ಟೆ ಕಟ್ ಮಾಡುವ ಕೆಲಸ ಮಾಡುತ್ತಿರುತ್ತೇನೆ. ಹಾಲಿ ಸಹ ಬಟ್ಟೆ ಕಟ್ ಮಾಡುವ ಕೆಲಸ ಮಾಡಬಹುದು ಎಂದರೆ ಸಾಕ್ಷಿಯು ಬಗ್ಗಿ ಎದ್ದೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಬಟ್ಟೆ ಕಟ್ ಮಾಡಿ ರೂ.20,000 ಆಧಾಯ ಬರುವ ಕೆಲಸದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಕಾರನ್ನು ಪ್ರಶಾಂತ ಓಡಿಸುತ್ತಿದ್ದು ಆತನಿಗೆ ಡಿಎಲ್ ಇರುತ್ತದೆ. ನಾನು ಆರೋಗ್ಯವಾಗಿ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಹಾಲಿ 36 ವರ್ಷ ವಯಸ್ಸಾಗಿರುತ್ತದೆ. ನಾನು ಕಾರಿನ ಮಧ್ಯ ಭಾಗದಲ್ಲಿ ಕುಳಿತಿರುತ್ತೇನೆ. ನನಗೆ ಹಾಕಿರುವ Spinal Cord ನ ಉಪಕರಣ ಶಾಶ್ವತ ದೇಹದಲ್ಲಿಯೇ ಇರುತ್ತದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.